ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ .
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ: ಸೆಸ್ಕ/ಆ&ಮಾಸಂ/ಎಫ್-844/02/2022-23/ 28263-367 ದಿನಾಂಕ: 31 MAR 2023

## ಸುತ್ತೋಲೆ

ವಿಷಯ: ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗಳು-2023ರ ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ.

ಉಲ್ಲೇಖ: ಅಪರ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿ ಮೈಸೂರು ಜಿಲ್ಲೆ ಮೈಸೂರುರವರ ಪತ್ರ ಸಂಖ್ಯೆ: ಇಎಲ್ಎನ್ (1) ಸಿಆರ್ 103/2022-23 ದಿನಾಂಕ: 18.03.2023.

*****

I. ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗಳು-2023ರ ಸಂಬಂಧ ಭಾರತೀಯ ಚುನಾವಣಾ ಆಯೋಗವು ಈಗಾಗಲೇ ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸಿದ್ದು, ಸದರಿ ಮಾದರಿ ನೀತಿ ಸಂಹಿತೆಯನ್ನು ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣ ಕಟ್ಟುನಿಟ್ಟಾಗಿ ಪಾಲಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದೆ.

ಅ. ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗ/ಚುನಾವಣಾಧಿಕಾರಿರವರು ನೀಡುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಆ. ಈಗಾಗಲೇ ಚಾಲ್ತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಸೂಚನಾಫಲಕ ಮತ್ತು ಕಛೇರಿಯ ಆವರಣದೊಳಗೆ/ಹೊರಗೆ ಪ್ರಕಟಿಸಲಾಗಿರುವ ಜಾಹೀರಾತು ಫಲಕಗಳಲ್ಲಿ ರಾಜಕೀಯ ಪಕ್ಷ/ ಮುಖಂಡರ ಭಾವಚಿತ್ರಗಳು ಕಾಣದ ರೀತಿಯಲ್ಲಿ ಕ್ರಮವಹಿಸುವುದು.

ಇ. ಮೇಲೆ ವಿವರಿಸಲಾದ ಪ್ರಕರಣವನ್ನು ಹೊರತುಪಡಿಸಿ ಚಾವಿಸನಿನಿ ಕಟ್ಟಡಗಳು/ ಕಛೇರಿಗಳು/ ಆವರಣದ/ ಬೋರ್ಡ್‌ಗಳು ಇತ್ಯಾದಿಗಳಲ್ಲಿ ಇರುವ ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಒಳಪಡುವಂತಹ ಗೋಡೆ ಬರಹಗಳು, ಪೋಸ್ಟರ್‌ಗಳು, ಬ್ಯಾನರ್, ಕಟೌಟ್/ ಹೋಲ್ಡಿಂಗ್ಸ್/ಫ್ಲ್ಯಾಗ್ಸ್ ಇತ್ಯಾದಿ ತೆರವುಗೊಳಿಸುವುದು.

ಈ. ಚಾವಿಸನಿನಿ ವೆಬ್‌ಸೈಟ್‌ನಲ್ಲಿ ಯಾವುದೇ ರಾಜಕೀಯ ವ್ಯಕ್ತಿಗಳು, ರಾಜಕೀಯ ಪಕ್ಷದವರ ಭಾವಚಿತ್ರವಿರುವುದನ್ನು ನಿಷೇಧಿಸಲಾಗಿರುವುದರಿಂದ ಸದರಿ ಭಾವಚಿತ್ರಗಳನ್ನು ತೆರವುಗೊಳಿಸಲು ಕ್ರಮವಹಿಸುವುದು.

ಉ. ಚುನಾವಣಾ ವೇಳಾಪಟ್ಟಿ ಪ್ರಕಟಿಸಿ ತಕ್ಷಣದಿಂದ ಚಾವಿಸನಿನಿ ನಿಧಿಯಿಂದ (ಸರ್ಕಾರಿ ಹಣ) ಯಾವುದೇ ಜಾಹೀರಾತುಗಳನ್ನು ನೀಡುವುದಕ್ಕೆ ನಿಷೇಧಿಸಲಾಗಿರುತ್ತದೆ. (ದಿನಪತ್ರಿಕೆಗಳು/ಇತರೆ ಮಾಧ್ಯಮಗಳು/ ಸರ್ಕಾರಿ ಪ್ರಚಾರ ಮಾಧ್ಯಮಗಳು/ಮುದ್ರಣ ಮಾಧ್ಯಮ).

II. ಚುನಾವಣಾ ಮಾದರಿ ನೀತಿ ಸಂಹಿತೆಯಲ್ಲಿ ಯಾವುದೇ ಸಂದೇಹ ಬಂದರೆ ಸಂಬಂಧಿಸಿದ ಚುನಾವಣಾ ಅಧಿಕಾರಿರವರಿಗೆ ನಿರ್ದೇಶನ ಕೋರಲು ಕ್ರಮವಹಿಸುವುದು.

ಚುನಾವಣಾಧಿಕಾರಿರವರಿಗೆ ಪತ್ರ ವ್ಯವಹಾರ ಮಾಡಿದ ಪ್ರತಿಯನ್ನು ಕೆಳಗೆ ಸಹಿ ಮಾಡಿದವರಿಗೆ ತಕ್ಷಣ ಈ-ಮೇಲ್ ಮೂಲಕ ನಂತರ ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಲು ಸೂಚಿಸಿದೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ.

ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ)
ಚಾವಿಸನಿನಿ., ಮೈಸೂರು.

**ಪು.ತಿ.ನೋ.**

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ). ಚಾವಿಸನಿನಿ. ಮೈಸೂರು.
2. ಮುಖ್ಯ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ ವಲಯ. ಚಾವಿಸನಿನಿ. ಮೈಸೂರು/ಹಾಸನ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನೆ ವೃತ್ತ. ಚಾವಿಸನಿನಿ.
5. ಕಂಪನಿ ಕಾರ್ಯದರ್ಶಿ. ನಿಗಮ ಕಛೇರಿ. ಚಾವಿಸನಿನಿ. ಮೈಸೂರು ಇವರ ಮಾಹಿತಿಗಾಗಿ.
6. ಉಪ ಪ್ರಧಾನ ವ್ಯವಸ್ಥಾಪಕರು. ಎಂ.ಐ.ಎಸ್. ಶಾಖೆ. ನಿಗಮ ಕಛೇರಿ. ನಿಗಮದ ವೆಬ್‌ಸೆಟ್ ನಲ್ಲಿ ಪ್ರಕಟಿಸಲು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ ವಿಭಾಗ. ಚಾವಿಸನಿನಿ.
8. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನೆ ಉಪವಿಭಾಗ. ಚಾವಿಸನಿನಿ.
9. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ. ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
10. ವ್ಯ1(ಆ&ಮಾಸಂ)/ಪ್ರ.ಕ.